| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 10 ನಿ | ಸಾ.ಉ.ಉ.ಕಾ.<br>ಶ್ರಮದಾನ ಹಾಗೂ ಶಾಲಾ ಕೈ–ತೋಟ ನಿರ್ಮಾಣ | * ಸಮಾಜ ಸೇವೆಯಲ್ಲಿ ಶ್ರಮದಾನ ಪ್ರಮುಖವಾದುದು ಹಾಗೂ ಕೈತೋಟದಿಂದ ಶಾಲೆಯ ಅಂದ ಹೆಚ್ಚುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಳ್ಳುವರು. | ಕೈತೋಟದ ಕೆಲಸ ನಿರ್ವಹಿಸಲು ಅಗತ್ಯವಾದ ಸಾಮಗ್ರಿಗಳು | ಶಿಕ್ಷಕ | ಮಕ್ಕಳನ್ನು ಮೂರು ಅಥವಾ ನಾಲ್ಕು ತಂಡಗಳಾಗಿ ಗುಂಪು ಮಾಡುವರು ಮತ್ತು ಅವರು ಮಾಡಬೇಕಾದ ಕೆಲಸಗಳನ್ನು ತಿಳಿಸುವರು ಅಗತ್ಯ ಸಾಮಗ್ರಿ ಒದಗಿಸುವರು. | ಸಾ.ಉ.ಉ.ಕಾ. | 1ನೇ ತರಗತಿಯಲ್ಲಿರುವ ಸಾಮರ್ಥ್ಯ 2ನೇ ತರಗತಿಗೂ ಸಂಬಂಧಿಸಿದೆ | | ಶಿಕ್ಷಕ | 1ನೇ ತರಗತಿಯಲ್ಲಿ ಸೂಚಿಸಿರುವಂತೆ ಎಲ್ಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವರು. |
| | 60 ನಿ | | | | ಶಿಕ್ಷಕ | **ಕಾರ್ಯ ಹಂಚಿಕೆ :**<br>ತಂಡ –1 : ಭೂಮಿಯನ್ನು ಅಗೆಯುವುದು<br>ತಂಡ – 2 : ಅಗೆದ ಮಣ್ಣಿನಲ್ಲಿರುವ ಕಸ ಕಲ್ಲು, ಕಳೆ, ಮುಂತಾದವನ್ನು ಆರಿಸುವುದು.<br>ತಂಡ – 3 : ಭೂಮಿಯನ್ನು ಸಮಗೊಳಿಸಿ ಪಾತಿ ಮಾಡುವುದು<br>**ಸೂಚನೆ :** ಶಿಕ್ಷಕರು ಕ್ರಿಯಾತ್ಮಕವಾಗಿ ಪಾಲ್ಗೊಂಡು ಮಕ್ಕಳಿಂದ ಕೆಲಸ ಮಾಡಿಸುವರು. | | | | | |
| | 10 ನಿ | | | | ಶಿಕ್ಷಕ | ಮಕ್ಕಳ ಕೈಕಾಲುಗಳ ಸ್ವಚ್ಛತೆ ಹಾಗೂ ಮಡಿಗಳಲ್ಲಿ ಸಸಿಗಳನ್ನು / ಬೀಜಗಳನ್ನು ನೆಡಲು ಅಗತ್ಯ ಸಲಹೆ ಸೂಚನೆ ನೀಡುವರು. | | | | | |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 EVS-8 | 10 ನಿ | ಪರಿಸರ ಅಧ್ಯಯನ<br>ನಮ್ಮ ಸುತ್ತಲಿನ ಪ್ರಾಣಿ ಮತ್ತು ಸಸ್ಯಗಳೊಡನೆ ಸ್ನೇಹ | ಸಸ್ಯಗಳ ಮತ್ತು ಪ್ರಾಣಿಗಳ ಪಾಲನೆ ಮತ್ತು ರಕ್ಷಣೆ ಕುರಿತು ತಿಳಿಯುವರು | ಸಸ್ಯಗಳ ಚಿತ್ರಪಟಗಳು, ನೈಜ ಮಾದರಿಗಳು, ಪಠ್ಯಪುಸ್ತಕ | ಶಿಕ್ಷಕ | **ಕಲಿಕೆಯ ಚಟುವಟಿಕೆ :**<br>ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿಕೊಳ್ಳುವರು ವಿವಿಧ ಸಸ್ಯಗಳ ಮಾದರಿಗಳು ಹಾಗೂ ಚಿತ್ರಗಳನ್ನು ಜೋಡಿಸಿಕೊಂಡು ಕಲಿಕೆಗೆ ಸಿದ್ಧಗೊಳಿಸುವರು. | ಪರಿಸರ ಅಧ್ಯಯನ<br>ನಮ್ಮ ಸುತ್ತಲಿನ ಸಸ್ಯಗಳು | ತನ್ನ ಸುತ್ತಲಿನ ಪರಿಸರದಲ್ಲಿನ ಮರಗಿಡಗಳು ಹಾಗೂ ಬೆಳೆಗಳನ್ನು ಗುರುತಿಸುವುದು<br>ಸಸ್ಯಗಳ ಎತ್ತರ ಎಲೆಗಳ ಆಕಾರ, ಹೂ, ಬಣ್ಣ ಮುಂತಾದವುಗಳನ್ನು ಹೋಲಿಸುವುದು. | ಚಿತ್ರಪಟ ಮಾದರಿಗಳು | ಶಿಕ್ಷಕ | **ಕಲಿಕೆಯ ಚಟುವಟಿಕೆ :**<br>1ನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ತೊಡಗುವರು. |
| | 40 ನಿ | | | | ಶಿಕ್ಷಕ | * ಶಿಕ್ಷಕರು ಸಸ್ಯಗಳನ್ನು ತೋರಿಸುತ್ತಾ ಅವುಗಳನ್ನು ಹೆಸರಿಸಲು ತಿಳಿಸುವರು ಹಾಗೂ ಅವುಗಳ ಉಪಯೋಗಗಳನ್ನು ಪ್ರಶ್ನಿಸುತ್ತಾ ಮನವರಿಕೆ ಮಾಡಿಕೊಡುವರು. ಇದೇ ರೀತಿ ಆಹಾರಕ್ಕಾಗಿ ಬೆಳೆಯುವ ಸಸ್ಯಗಳು, ಹಣ್ಣು, ತರಕಾರಿ ಸಸ್ಯಗಳನ್ನು ಮಾದರಿ ಹಾಗೂ ಚಿತ್ರಗಳ ಸಹಾಯದಿಂದ ಪರಿಚಯಿಸುವರು.<br>* ಸಸ್ಯಗಳಿಂದ ನಮಗಿರುವ ಉಪಯೋಗಗಳನ್ನು ಹೇಳಿಸುತ್ತಾ ಅವುಗಳನ್ನು ಹೇಗೆ ರಕ್ಷಿಸಬೇಕು ಪರಿಸರವನ್ನು ಹೇಗೆ ಕಾಪಾಡಬೇಕು ಎಂಬುದನ್ನು ಮನವರಿಕೆ ಮಾಡುವರು. ಪುಟಸಂಖ್ಯೆ 16 (ಪಠ್ಯಪುಸ್ತಕ)ನ್ನು ಬಳಸಿಕೊಳ್ಳುವರು. | | | ಚಿತ್ರಪಟ ಮಾದರಿಗಳು | ಶಿಕ್ಷಕ | 1ನೇ ತರಗತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 30 ನಿ | | | | ಹಿರೇಮಣಿ | ಪುಟಸಂಖ್ಯೆ 15ರ ಚಿತ್ರಗಳನ್ನು ತೋರಿಸಿ ಪ್ರಶ್ನಿಸುವರು.<br><br>**ಸೂಚನೆ :** ಶಿಕ್ಷಕರು ಎರಡೂ ತರಗತಿಯ ವಿದ್ಯಾರ್ಥಿಗಳು ಸಮರ್ಪಕವಾಗಿ ಚಟುವಟಿಕೆಯಲ್ಲಿ ಭಾಗವಹಿಸಲು ಅಗತ್ಯ ಮಾರ್ಗದರ್ಶನ ಮೇಲ್ವಿಚಾರಣೆ ಮಾಡುವರು. | | | | ಸ್ವಕಲಿಕೆ | 1 ಪುಟ – 7ರ ಚಟುವಟಿಕೆ ಮಾಡಲು ಸೂಚಿಸುವರು. ""ನೋಡಿರುವ ಸಸ್ಯಗಳನ್ನು ಈ ಕೆಳಗಿನ ಗುಂಪಿನಲ್ಲಿ ಬರೆ" ಚಟುವಟಿಕೆಯನ್ನು ಮಾಡುವರು. |

""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **01**<br>**40ನಿ** | 10 ನಿ | **ದೈಹಿಕ ಶಿಕ್ಷಣ**<br>**ಸಾಮೂಹಿಕ ಕವಾಯಿತು** | ದೈಹಿಕ ವ್ಯಾಯಾಮದ ಮಹತ್ವ ಅರಿಯುವರು | ಶಾಲಾ ಹೊರಾಂಗಣ | ಶಿಕ್ಷಕ | ಮಕ್ಕಳನ್ನು ಸಾಲಾಗಿ ಎತ್ತರಕ್ಕೆ ಅನುಗುಣವಾಗಿ ನಿಲ್ಲಿಸುವರು. ಸೂಕ್ತ ಅಂತರ ಇರುವಂತೆ ನೋಡಿಕೊಳ್ಳುವರು. ನಿಲ್ಲುವ, ಸಾವಧಾನ, ವಿಶ್ರಾಂತಿ ನೀತಿಗಳಿಗೆ ಚಲಿಸುವಂತೆ ಆಜ್ಞೆಗಳನ್ನು ನೀಡುತ್ತಾ ಅನೌಪಚಾರಿಕ ವ್ಯಾಯಾಮಗಳನ್ನು ಮಾಡಿಸಲು ಸಿದ್ಧತೆ ಮಾಡುವರು. | | | | | ತರಗತಿ 1ರಲ್ಲಿ ಸೂಚಿಸಿರುವ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 25 ನಿ | | | | ಶಿಕ್ಷಕ | ಮೇಲಿನಂತೆ ಎಲ್ಲಾ ಚಟುವಟಿಕೆಗಳನ್ನು ಸೂಕ್ತ ನಿರ್ದೇಶನ ಮತ್ತು ಆಜ್ಞೆಗಳನ್ನು ಕೊಟ್ಟು ವ್ಯಾಯಾಮ ಮಾಡಿಸುವರು. | | | | | |
| | 05 ನಿ | | | | ಹಿರೇಮಣಿ | ಸಾಲಾಗಿ ತರಗತಿಗೆ ಕಳಿಸುವರು. | | | | | |
| **2**<br>**KAN-14** | 10 ನಿ | **ಕನ್ನಡ**<br>**ಒಗ್ಗಟ್ಟಿನಲ್ಲಿ ಬಲವಿದೆ ಮತ್ತು ರೇಖಾಭ್ಯಾಸ** | ಹೇಳಲಾದ ಪಠ್ಯದಲ್ಲಿನ ಮಾಹಿತಿಯನ್ನು ನೆನಪಿಸಿಕೊಳ್ಳುವುದು | ಪೂರಕ ಕಥೆ, ಹಾಡು, ಚಿತ್ರಕಥೆ, ಧ್ವನಿಸುರುಳಿ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಒಗ್ಗಟ್ಟಿನಲ್ಲಿ ಬಲ. ಇದಕ್ಕೆ ಸಂಬಂಧಿಸಿದಂತೆ ಅಭಿನಯ ಗೀತೆಯನ್ನು ಹೇಳಿ ಕೊಡುವರು.<br>ಉದಾ : ಹೊಲಗಳ ಪಕ್ಕದಲ್ಲಿ....................................<br>.....................ಇದೇ ಒಗ್ಗಟ್ಟಿನಲ್ಲಿ ಬಲ. | **ಭಾಷೆ**<br>**ಮೂರು ಕೊಡಲಿಗಳು** | ಸುಮಾರು ಪದಗಳನ್ನು ಓದಿ ಗ್ರಹಿಸುವ ಸಾಮರ್ಥ್ಯಗಳನ್ನು ಬೆಳೆಸುವರು. | | ಶಿಕ್ಷಕ | 1ನೇ ತರಗತಿಯ ಮಕ್ಕಳ ಚಟುವಟಿಕೆಯಲ್ಲಿ ಭಾಗವಹಿಸುವರು.<br>ಹಿರೇಮಣಿಯ ನೇತೃತ್ವದಲ್ಲಿ ಪಾಠ ಓದುವಂತೆ ತಿಳಿಸುವರು. |
| | 30 ನಿ | | | ಪಠ್ಯಪುಸ್ತಕ ಚಿತ್ರಕಥೆ | ಶಿಕ್ಷಕ | ""ನರಿ ಮತ್ತು ದ್ರಾಕ್ಷಿ / ಪಾರಿವಾಳ ಮತ್ತು ಬೇಡ" ಈ ಕಥೆಗಳನ್ನು ಹೇಳುವರು ನಂತರ ಕಥೆಗೆ ಸಂಬಂಧಿಸಿದ ಸರಳ ಪ್ರಶ್ನೆಗಳನ್ನು ಕೇಳುವರು.<br>ಉದಾ : ಪಾರಿವಾಳ ಎಲ್ಲಿತ್ತು ? ಇತ್ಯಾದಿ. | | | ಪಠ್ಯ ಪುಸ್ತಕ | ಹಿರೇಮಣಿ | "ಮೂರು ಕೊಡಲಿ'ಗಳು ಪಾಠವನ್ನು ಮೊದಲು ಹಿರೇಮಣಿ ನಂತರ ಉಳಿದ ಮಕ್ಕಳು ಓದುವರು. ಇತರರು ಅದನ್ನು ಆಲಿಸುತ್ತಾ ಪಾಠವನ್ನು ಗಮನಿಸುವರು. |
| | 30 ನಿ | | | ಚಿತ್ರಕಥೆ ಧ್ವನಿ ಸುರುಳಿ | ಹಿರೇಮಣಿ | ಶಿಶುಗೀತೆ / ಕಥೆಗಳ ಧ್ವನಿ ಸುರುಳಿಯನ್ನು ಮಕ್ಕಳಿಗೆ ಕೇಳಿಸುವರು. ಮಕ್ಕಳು ಆಲಿಸುವರು. | | | ಪಠ್ಯ ಪುಸ್ತಕ | ಶಿಕ್ಷಕ | ಅಭ್ಯಾಸದ ಚಟುವಟಿಕೆಯಲ್ಲಿರುವ ಎಲ್ಲಾ ಪ್ರಶ್ನೆಗಳನ್ನು ಮಕ್ಕಳಿಗೆ ವೈಯಕ್ತಿಕವಾಗಿ ಕೇಳಿ ಉತ್ತರ ಪಡೆಯುವರು ಹಾಗೂ ತಪ್ಪು ಉತ್ತರಗಳನ್ನು ಮಕ್ಕಳಿಂದಲೇ ತಿದ್ದಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳು ಆಲಿಸಿದ ಕಥೆ / ಗೀತೆಗೆ ಸಂಬಂಧಿಸಿದಂತೆ ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು. | | | | | ಎಲ್ಲಾ ಮಕ್ಕಳನ್ನು ಪ್ರಶಂಶಿಸಿ ಚೆನ್ನಾಗಿ ಉತ್ತರ ಹೇಳಿದ ಮಕ್ಕಳನ್ನು ಪ್ರೋತ್ಸಾಹಿಸುವರು. |

**""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| | | | | | | **ಸೂಚನೆ :** ಸಾ.ಉ.ಉ.ಕಾ.ದಲ್ಲಿ 1 ಹಾಗೂ 2ನೇ ತರಗತಿಯಲ್ಲಿನ ಎಲ್ಲಾ ವಿಷಯಾಂಶ ಹಾಗೂ ಸಾಮರ್ಥ್ಯಗಳು ಒಂದೇ ಆಗಿರುವುದರಿಂದ ಮಕ್ಕಳು ಒಟ್ಟಿಗೆ ಚಟುವಟಿಕೆಯಲ್ಲಿ ತೊಡಗುವರು. | | | | | |
| 3 | 10 ನಿ | ಸಾ.ಉ.ಉ.ಕಾ. ಶ್ರಮದಾನ ಹಾಗೂ ಶಾಲಾ ಕೈ ತೋಟದ ನಿರ್ಮಾಣ (ಮುಂದುವರೆದುದು) | * ಸಮಾನ ಸೇವೆಯಲ್ಲಿ ಶ್ರಮದಾನ ಪ್ರಮುಖವಾದುದು ಹಾಗೂ ಕೈ ತೋಟದಿಂದ ಶಾಲೆಯ ಅಂದ ಹೆಚ್ಚುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಳ್ಳುವರು. | ಭೂಮಿ ಅಗೆಯಲು ಅವಶ್ಯಕ ಸಾಮಗ್ರಿಗಳು ಹೂವು ಹಾಗೂ ತರಕಾರಿ ಬೀಜಗಳು | ಶಿಕ್ಷಕ | ಮೊದಲಿಗೆ ಶಿಕ್ಷಕರು ಹಿಂದಿನ ತರಗತಿಯಂತೆ ಮಕ್ಕಳನ್ನು ಮೂರು ತಂಡಗಳಾಗಿ ವಿಂಗಡಿಸಿ, ತಾವು ತಂದಿರುವ ಸಸ್ಯಗಳು ಹಾಗೂ ಬೀಜಗಳನ್ನು ನೆಡಲು ಸಿದ್ಧಪಡಿಸಿಕೊಳ್ಳುವರು. | 1ನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | | |
| | 60 ನಿ | | | | ಶಿಕ್ಷಕ | ಮಕ್ಕಳು ತಾವು ತಂದಿರುವ ಸಸ್ಯಗಳು, ಹೂವಿನ, ಹಣ್ಣಿನ ಹಾಗೂ ತರಕಾರಿ ಬೀಜಗಳನ್ನು ವಿಂಗಡಿಸುವರು ಹಾಗೂ ಶಿಕ್ಷಕರ ಸೂಚನೆಯಂತೆ ಅವುಗಳನ್ನು ಸೂಕ್ತ ಪಾತಿ (ಮಡಿ)ಗಳಲ್ಲಿ ನೆಡುವರು.<br>ನಂತರ ಅವುಗಳಿಗೆ ಅವಶ್ಯಕವಿದ್ದಷ್ಟು ನೀರನ್ನು ಹಾಯಿಸುವರು. (ಅವಶ್ಯಕವಿದ್ದಲ್ಲಿ, ಹಿರಿಯ ವಿದ್ಯಾರ್ಥಿಗಳ ಸಹಾಯ ಪಡೆಯಬಹುದು).<br>ಅವಶ್ಯಕವಿದ್ದಲ್ಲಿ, ಆ ಸಸ್ಯಗಳಿಗೆ ಶಿಕ್ಷಕರ ಸೂಚನೆಯಂತೆ ಅಗತ್ಯ ರಕ್ಷಣಾ ವ್ಯವಸ್ಥೆಯನ್ನು ಮಾಡುವರು. | | | | | |
| | 10 ನಿ | | | | ಶಿಕ್ಷಕ | ಕೊನೆಯಲ್ಲಿ, ಶಿಕ್ಷಕರು ಎಲ್ಲಾ ಮಕ್ಕಳಿಗೆ ತಮ್ಮ ಕೈಕಾಲುಗಳನ್ನು ಸ್ವಚ್ಛಗೊಳಿಸಿಕೊಳ್ಳುವಂತೆ ಸೂಚನೆ ನೀಡುವುದು ಹಾಗೂ ಮುಂದಿನ ದಿನಗಳಲ್ಲಿ ಸಸ್ಯಗಳ (ಕೈ–ತೋಟ) ನಿರ್ವಹಣೆಯ ಕಾರ್ಯ ಹಂಚಿಕೆಯನ್ನು ಮಾಡುವರು. | | | | | |

""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 KAN-15 | 10 ನಿ | **ಭಾಷೆ** **ಒಗ್ಗಟ್ಟಿನಲ್ಲಿ ಬಲವಿದೆ ಮತ್ತು ರೇಖಾಭ್ಯಾಸ** | ಹೇಳಲಾದ ಪತ್ಯದಲ್ಲಿನ ಮಾಹಿತಿಯನ್ನು ನೆನಪಿಸಿಕೊಳ್ಳುವುದು ಹಾಗೂ ಬರವಣಿಗೆ ಪೂರಕ ಅಭ್ಯಾಸ | ಪೂರಕ ಕಥೆ | ಶಿಕ್ಷಕ | 2ನೇ ತರಗತಿಯಲ್ಲಿ ಸೂಚಿಸಿರುವ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | **ಕನ್ನಡ** **ಆಪತ್ತಿಗಾದವರು** | * ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವುದು<br>* ಸರಳ ವಿವರಣಾತ್ಮಕ ವಾಕ್ಯಗಳನ್ನು ಬರೆಯುವುದು. | ಪೂರಕ ಕಥೆ | ಶಿಕ್ಷಕರು | **ಪೂರ್ವಸಿದ್ಧತಾ ಚಟುವಟಿಕೆ :** ಎಲ್ಲಾ ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿಕೊಂಡು ಕಥೆ ಹೇಳಲು ಸಿದ್ಧತೆ ಮಾಡಿಕೊಳ್ಳುವರು. |
| | 20 ನಿ | | | ವಾಲ್ ಸ್ಲೇಟ್ ಕಪ್ಪು ಹಲಗೆ | ಶಿಕ್ಷಕ | 2ನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ಈ ಮಕ್ಕಳೂ ಪಾಲ್ಗೊಳ್ಳುವರು. | | | | ಶಿಕ್ಷಕ | "ಬ್ರಾಹ್ಮಣ ಮತ್ತು ಹುಲಿ" ಕಥೆಯನ್ನು ಭಾವಪೂರ್ಣವಾಗಿ ಹೇಳುವರು ಹಾಗೂ ಸಂಬಂಧಿಸಿದಂತೆ ಪ್ರಶ್ನೆ ಕೇಳುವರು.<br>ಉದಾ : ಹುಲಿ ಬ್ರಾಹ್ಮಣನನ್ನು ಏನೆಂದು ಕೇಳಿಕೊಂಡಿತು? |
| | 10 ನಿ | | | | ಶಿಕ್ಷಕ | **(ರೇಖಾಭ್ಯಾಸ)**<br>ಮಕ್ಕಳಿಗೆ ಪುಟಸಂಖ್ಯೆ 15,16ರ ಸರಳ ರೇಖಾಭ್ಯಾಸವನ್ನು ಬರೆಯುವ ಕ್ರಮವನ್ನು ಶಿಕ್ಷಕರು ಕಪ್ಪು ಹಲಗೆಯ ಮೇಲೆ ಬರೆದು ತೋರಿಸುವರು ಹಾಗೂ ಹಿರೇಮಣಿಯಿಂದ ಅದನ್ನು ಬರೆಸಿ ದೃಢಪಡಿಸಿಕೊಳ್ಳುವರು. ಅದರಂತೆ ಬರೆಯಲು ಎಲ್ಲಾ ಮಕ್ಕಳಿಗೂ ಸೂಚಿಸುವರು. | | | | ಸ್ವಕಲಿಕೆ | **ಕಲಿಕಾಂಶ ಚಟುವಟಿಕೆ :**<br>ಪುಟಸಂಖ್ಯೆ 34ರ ಪಾಠವನ್ನು ""ಆರಂಭದಿಂದ ........................ ಒಡನಾಡಿಗಳು"ವರೆಗೆ ಓದಿಕೊಳ್ಳಲು ತಿಳಿಸುವರು. |
| | 30 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ಮಕ್ಕಳು ಪಾಲ್ಗೊಳ್ಳುವರು. | | | | ಶಿಕ್ಷಕ | ಮೇಲಿನ ಪಾಠವನ್ನು ಸೂಕ್ತ ಸ್ವರಭಾರದೊಂದಿಗೆ ಓದುವರು, ಮಕ್ಕಳು ಪಾಠವನ್ನು ಗಮನಿಸುತ್ತಾ ಆಲಿಸುವರು.<br>ಪ್ರತಿ ಮಕ್ಕಳಿಂದ ಶಿಕ್ಷಕರು 1 ಅಥವಾ 2 ವಾಕ್ಯ ಓದಿಸುವರು, ಮಕ್ಕಳ ತಪ್ಪುಗಳನ್ನು ತಿದ್ದುವರು. ಈ ಪ್ಯಾರಾಕ್ಕೆ ಸಂಬಂಧಿಸಿದಂತೆ ಸರಳ ಪ್ರಶ್ನೆಗಳನ್ನು ಕೇಳುವರು.<br>ಉದಾ : ಅರಣ್ಯದಲ್ಲಿ ಯಾವ ಯಾವ ಪ್ರಾಣಿಗಳು ವಾಸವಾಗಿದ್ದವು?...... ಇತ್ಯಾದಿ. |
| | 10 ನಿ | | | | ಶಿಕ್ಷಕ | ಮಕ್ಕಳು ಬರೆದಿರುವ ರೇಖಾಭ್ಯಾಸವನ್ನು ಪರಿಶೀಲಿಸುವರು. ಅಗತ್ಯ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಮಾಡಿರುವ ಪಾಠದ ಭಾಗವನ್ನು ನಕಲು ಮಾಡಿಕೊಂಡು ಬರಲು ಸೂಚಿಸುವರು ಮತ್ತು ಪಾಠದ ಮುಖ್ಯಾಂಶಗಳನ್ನು ಗಮನಿಸುತ್ತಾ ಓದಿಕೊಳ್ಳುವಂತೆ ಸೂಚಿಸುವರು. |

**""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ನಿಮಿಷ | ವಿಷಯ ಕಲಿಕಾ ಕ್ಷೇತ್ರ | ಕಲಿಕಾಂಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಕಲಿಕಾ ಕ್ಷೇತ್ರ | ಕಲಿಕಾಂಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 M-9 | 10 ನಿ | ಗಣಿತ ಸಂಖ್ಯೆಗಳು | * 6 ರಿಂದ 10ರ ವರೆಗಿನ ಸಂಖ್ಯೆಗಳನ್ನು ಓದುವುದು, ಗುರುತಿಸುವುದು ಮತ್ತು ಬರೆಯುವುದು. | ಪಠ್ಯಪುಸ್ತಕ ನೋಟ್ ಪುಸ್ತಕ | ಶಿಕ್ಷಕ | ತಮ್ಮ ಸ್ಲೇಟಿನಲ್ಲಿ 8 ಹಾಗೂ 9ನ್ನು ಬರೆದು ತಿದ್ದುವಂತೆ ಶಿಕ್ಷಕರು ಸೂಚನೆ ನೀಡುವರು. (ಪ್ರಾರಂಭಿಸುವ ಹಾಗೂ ಮುಗಿಸುವ ದಿಕ್ಕನ್ನು ನಿರ್ದಿಷ್ಟಗೊಳಿಸುವರು). ನೋಟ್ ಪುಸ್ತಕದಲ್ಲಿ 1 ರಿಂದ 9ರವರೆಗೆ ಅಂಕೆಗಳನ್ನು ಬರೆಯಲು ಸೂಚಿಸುವರು. | ಗಣಿತ ಸಂಖ್ಯೆಗಳು | * ಎರಡು ಅಂಕೆಗಳುಳ್ಳ ಸಂಖ್ಯೆಗಳಲ್ಲಿ ಬಿಡಿ ಮತ್ತು ಹತ್ತು ಸ್ಥಾನಗಳನ್ನು ಗುರುತಿಸುವುದು * ಹತ್ತು ಗುಂಪು ಬಿಡಿಗಳಾಗಿ ಬಿಡಿಸಿ ಬರೆಯುವುದು. | | ಶಿಕ್ಷಕರು | ಹಿಂದಿನ ತರಗತಿಯಲ್ಲಿ ತಯಾರಿಸಿದ ಸ್ಥಾನಬೆಲೆ ಪಟ್ಟಿಗಳಲ್ಲಿರುವ ಸಂಖ್ಯೆ ಹಾಗೂ ಅದರಲ್ಲಿರುವ ಹತ್ತುಗಳು ಹಾಗೂ ಬಿಡಿಗಳನ್ನು ಓದುವಂತೆ ಮಕ್ಕಳಿಗೆ ಸೂಚನೆ ನೀಡುವರು. |
| | 30 ನಿ | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು 8 ಹಾಗೂ 9ನ್ನು ಸ್ಲೇಟಿನಲ್ಲಿ ಬರೆದುಕೊಂಡು ತಿದ್ದುವರು.<br>ನಂತರ ನೋಟ್ ಪುಸ್ತಕದಲ್ಲಿ 1 ರಿಂದ 8ರ ವರೆಗೆ ಸಂಖ್ಯೆಗಳನ್ನು ಬರೆಯುವರು. | | | ಪಠ್ಯ ಪುಸ್ತಕ | ಶಿಕ್ಷಕ | ಪುಟ ಸಂಖ್ಯೆ – 27ರಲ್ಲಿರುವ ಉದಾಹರಣೆಗಳನ್ನು ಬಳಸಿಕೊಂಡು ಶಿಕ್ಷಕರು ಮಕ್ಕಳಿಗೆ ಎರಡಂಕಿ ಸಂಖ್ಯೆಯ ಸ್ಥಾನ ಬೆಲೆಗಳನ್ನು ಬರೆಯುವ ವಿಧಾನವನ್ನು ಅಭ್ಯಾಸ ಮಾಡಿಸುವರು.<br>ಉದಾ : 85ರಲ್ಲಿ 8ರ ಸ್ಥಾನ ಬೆಲೆ [8] ಹತ್ತುಗಳು = 80<br>5ರ ಸ್ಥಾನ ಬೆಲೆ [5] ಬಿಡಿಗಳು = 5<br>ಉದಾಹರಣೆಯಂತೆ, ಮಕ್ಕಳು ಸೂಚಿಸಿದ ಎಲ್ಲಾ ಸಂಖ್ಯೆಗಳಲ್ಲಿ 'ಹತ್ತುಗಳು ಹಾಗೂ ಬಿಡಿಗಳು' ಹೇಳಿಸುವುದು. |
| | 10 ನಿ | | | | ಶಿಕ್ಷಕ | ಶಿಕ್ಷಕರು ಪಠ್ಯಪುಸ್ತಕದ ಪುಟಸಂಖ್ಯೆ 32, 33ರಲ್ಲಿರುವ ಅಭ್ಯಾಸವನ್ನು ಅಂದವಾಗಿ ತಿದ್ದಿ ಬರೆಯುವಂತೆ ಶಿಕ್ಷಕರು ಮಕ್ಕಳಿಗೆ ಸೂಚನೆ ನೀಡುವರು. | | | | ಶಿಕ್ಷಕ | ನಂತರ ಶಿಕ್ಷಕರು ಪುಟ ಸಂಖ್ಯೆ – 28ರಲ್ಲಿನ ಅಭ್ಯಾಸ ಮಾಡುವಂತೆ ಸೂಚಿಸುವರು. |
| | 25 ನಿ | | | | ಶಿಕ್ಷಕ | ಸೂಚನೆಯಂತೆ ಮಕ್ಕಳು ಅಭ್ಯಾಸ ಮಾಡುವರು, ಶಿಕ್ಷಕರು ನಿರಂತರವಾಗಿ ಮಕ್ಕಳ ಬರವಣಿಗೆ ಗಮನಿಸುತ್ತಾ ಸೂಕ್ತ ಮಾರ್ಗದರ್ಶನ ನೀಡುವರು. | | | ಪಠ್ಯ ಪುಸ್ತಕ | ಹಿರೇಮಣಿ | ಮಕ್ಕಳು ಪುಟ – 28ರಲ್ಲಿ ಅಭ್ಯಾಸದಲ್ಲಿ ಬಿಟ್ಟ ಸ್ಥಳಗಳನ್ನು ತುಂಬುವರು ಮತ್ತು ಹಿರೇಮಣಿಯ ನೇತೃತ್ವದಲ್ಲಿ ತರಗತಿಯ ಮುಂಭಾಗಕ್ಕೆ ಬಂದು ಗಟ್ಟಿಯಾಗಿ ಓದುವರು. |
| | 05 ನಿ | | | | | ಮಕ್ಕಳ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಮಕ್ಕಳ ಚಟುವಟಿಕೆಯನ್ನು ಪರಿಶೀಲಿಸುವರು. ತಿದ್ದುಪಡಿ ಮಾಡುವರು. |

""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಒಂದನೇ ತರಗತಿ: ಸಾಮರ್ಥ್ಯದ ವಿವರ | ಒಂದನೇ ತರಗತಿ: ಬಳಸ ಬಹುದಾದ ಕಲಿಕಾ ಸಾಮಗ್ರಿ | ಒಂದನೇ ತರಗತಿ: ನಿರ್ವಹಣೆ | ಒಂದನೇ ತರಗತಿ: ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಎರಡನೇ ತರಗತಿ: ಸಾಮರ್ಥ್ಯದ ವಿವರ | ಎರಡನೇ ತರಗತಿ: ಬಳಸ ಬಹುದಾದ ಕಲಿಕಾ ಸಾಮಗ್ರಿ | ಎರಡನೇ ತರಗತಿ: ನಿರ್ವಹಣೆ | ಎರಡನೇ ತರಗತಿ: ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | | | | | | **ಸೂಚನೆ :** ಈ ಅವಧಿಯ ಎಲ್ಲಾ ಹಂತಗಳಲ್ಲಿಯೂ ಎರಡೂ ತರಗತಿಯ ಮಕ್ಕಳು ಒಟ್ಟಿಗೆ ಭಾಗವಹಿಸುತ್ತಾರೆ. | | | | | 1ನೇ ತರಗತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು |
| | 20 ನಿ | ಜೀವನ ವಿಜ್ಞಾನ<br>ಉತ್ತಮ ಉಸಿರಾಟದ ಅಭ್ಯಾಸಗಳನ್ನು ಬೆಳೆಸುವುದು | ಉತ್ತಮ ಉಸಿರಾಟದ ಅಭ್ಯಾಸಗಳನ್ನು ಕಲಿಯುವರು ಹಾಗೂ ಸಮಸ್ಥಿತಿ ಆಸನಗಳನ್ನು ಪರಿಚಯಿಸಿಕೊಳ್ಳುವರು. | ಜಮಖಾನಗಳು | ಶಿಕ್ಷಕ | ಎಲ್ಲಾ ಮಕ್ಕಳನ್ನು ತರಗತಿ ಕೋಣೆಯಲ್ಲಿ ನಿರ್ದಿಷ್ಟ ಅಂತರಗಳಲ್ಲಿ ಕೂರಿಸುವರು ಹಾಗೂ ಸಹಜ ಉಸಿರಾಟ (ರೇಚಕ, ಪೂರಕ)ವನ್ನು ಹತ್ತು ಬಾರಿ ಮಾಡಿಸುವುದು. | ಜೀವನ ವಿಜ್ಞಾನ | | | | |
| | 50 ನಿ | | | | ಶಿಕ್ಷಕ | ಸಮಸ್ಥಿತಿಯಲ್ಲಿ ನಿಲ್ಲುವ, ಕೂರುವ ಹಾಗೂ ಮಲಗುವ ಭಂಗಿಗಳನ್ನು ಪರಿಚಯಿಸುವರು ಹಾಗೂ ಶಿಕ್ಷಕರ ನೇತೃತ್ವದಲ್ಲಿ ಮಕ್ಕಳು ಪ್ರಾಯೋಗಿಕವಾಗಿ ಮಾಡುವರು. | | | | | |
| | 10 ನಿ | | | | ಶಿಕ್ಷಕ | ಅಲ್ಪ ವಿಶ್ರಾಂತಿಯ ನಂತರ ಮುಂದಿನ ತರಗತಿಗೆ ಸಿದ್ಧರಾಗುವರು. | | | | | |

""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4<br>EVS-9 | 10 ನಿ | ಪರಿಸರ ಅಧ್ಯಯನ<br>ಪ್ರಾಣಿ ಮತ್ತು ಸಸ್ಯಗಳೊಡನೆ ಸ್ನೇಹ | ಸಸ್ಯಗಳು ಮತ್ತು ಪ್ರಾಣಿಗಳ ಪಾಲನೆ ಮತ್ತು ರಕ್ಷಣೆ ಕುರಿತು ತಿಳಿಯುವುದು. | ಹಸು, ಬೆಕ್ಕು, ನಾಯಿ, ಎಮ್ಮೆ, .....ಇತ್ಯಾದಿ ಸಾಕು ಪ್ರಾಣಿಗಳ ಚಿತ್ರಗಳು | ಶಿಕ್ಷಕ | ಹಿರೇಮಣಿಯ ನೇತೃತ್ವದಲ್ಲಿ ಚಿತ್ರಪಟಗಳನ್ನು ನೀಡಿ ಈ ಪ್ರಾಣಿಯನ್ನು ನಿಮ್ಮ ಮನೆಯಲ್ಲಿ ಸಾಕಿದ್ದೀರಾ ? ಏತಕ್ಕಾಗಿ ಸಾಕುವಿರಿ ? ಈ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಲು ತಿಳಿಸುವರು. | ಪರಿಸರ ಅಧ್ಯಯನ<br>ನಮ್ಮ ಸುತ್ತಲಿನ ಸಸ್ಯಗಳು | ನಮ್ಮ ಸುತ್ತಲಿನ ಪರಿಸರದಲ್ಲಿರುವ ಮರ ಗಿಡಗಳು ಹಾಗೂ ಬೆಳೆಗಳನ್ನು ಗುರುತಿಸುವುದು<br>ಸಸ್ಯಗಳ ಎತ್ತರ ಎಲೆಗಳ ಆಕಾರ, ಹೂ, ಬಣ್ಣ ಮುಂತಾದವುಗಳನ್ನು ಹೋಲಿಸುವುದು. | ವಿವಿಧ ಸಸ್ಯಗಳ ಎಲೆಗಳು ಹಾಗೂ ಹೂಗಳು | ಶಿಕ್ಷಕ | ವಿದ್ಯಾರ್ಥಿಗಳನ್ನು ವೃತ್ತಾಕಾರವಗಿ ಕೂರಲು ತಿಳಿಸಿ ಪುಟಸಂಖ್ಯೆ 9ನ್ನು ತೆರೆಯಲು ಸೂಚಿಸುವರು. |
| | 30 ನಿ | | | | ಹಿರೇಮಣಿ | **ಅಭ್ಯಾಸ ಮತ್ತು ಬಳಕೆಯ / ಪುನರ್ಬಲನ ಚಟುವಟಿಕೆ :**<br>ಹಿರೇಮಣಿಯ ನೇತೃತ್ವದಲ್ಲಿ ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | ಪಠ್ಯಪುಸ್ತಕ | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :**<br>ಪುಟಸಂಖ್ಯೆ 9ರ "ಅ' ಚಟುವಟಿಕೆಯನ್ನು ವಿವಿಧ ಹೂಗಳನ್ನು ಬಳಸಿ ಮಾಡಿಸುವರು.<br>ಉದಾ : ಇದು ಯಾವ ಹೂವು ? ಇದರ ಬಣ್ಣವೇನು? ಇತ್ಯಾದಿ.<br>* ನಂತರ ಚಟುವಟಿಕೆ ""ಇ" ಮಾಡಿಸುವರು. ಶಿಕ್ಷಕರು ಪ್ರಶ್ನೆ ಕೇಳಿ ಉತ್ತರ ಪಡೆಯುತ್ತಾ ಮಕ್ಕಳು ಅಭ್ಯಾಸ ಪುಸ್ತಕದಲ್ಲಿನ ಪುಟ 9ರ ಖಾಲಿ ಜಾಗಗಳ ಭರ್ತಿ ಮಾಡಿಸುವರು. |
| | 30 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ನಿಲ್ಲಿಸುವಂತೆ ಸೂಚಿಸಿ ಎರಡನೇ ತರಗತಿಯ ಚಟುವಟಿಕೆಯಲ್ಲಿ ಭಾಗವಹಿಸುವಂತೆ ತಿಳಿಸುವರು. ಮಕ್ಕಳು ಎರಡನೇ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | | | ವಿವಿಧ ಸಸ್ಯಗಳ ಚಿತ್ರಗಳು | ಶಿಕ್ಷಕ | **ನಿರ್ದೇಶನ ಆಟ :**<br>* ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಒಂದು ಮಗು ಒಂದು ಸಸ್ಯದ ಹೆಸರನ್ನು ಹೇಳಿ ಇನ್ನೊಂದು ಮಗುವನ್ನು ತೋರಿಸಲು ತಿಳಿಸುವರು ಆ ಮಗು ಆ ಸಸ್ಯದ ಉಪಯೋಗದ ವಿಚಾರವಾಗಿ ಒಂದು ವಾಕ್ಯ ಹೇಳಿ ಮತ್ತೊಂದು ಮಗುವನ್ನು ತೋರಿಸಲಿ, ಆ ಮಗು ಮೇಲಿನಂತೆ ಮುಂದುವರೆಸುವ ಸೂಚನೆ ನೀಡಿ ಆಟ ಆಡಿಸುವರು. |
| | 10 ನಿ | | | | ಶಿಕ್ಷಕ | ಹಿರೇಮಣಿ ನೇತೃತ್ವದಲ್ಲಿ ಕೈಗೊಂಡ ಚಟುವಟಿಕೆಯನ್ನು ಪರಿಶೀಲಿಸುವರು. | | | | ಶಿಕ್ಷಕ | ಪಠ್ಯಪುಸ್ತಕದ ಅಭ್ಯಾಸ ಚಟುವಟಿಕೆಯನ್ನು ಮತ್ತೊಮ್ಮೆ ನೋಟ್ ಪುಸ್ತಕದಲ್ಲಿ ಬರೆದುಕೊಂಡು ಬರುವಂತೆ ಗೃಹಪಾಠ ನೀಡುವರು. |

""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

ದಿನ - 14

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 Kan-16 | 10 ನಿ | ಕನ್ನಡ ಒಗ್ಗಟ್ಟಿನಲ್ಲಿ ಬಲವಿದೆ ಮತ್ತು ರೇಖಾಭ್ಯಾಸ | ಹೇಳಲಾದ ಪದ್ಯದಲ್ಲಿನ ಮಾಹಿತಿಯನ್ನು ನೆನಪಿಸಿಕೊಳ್ಳುವುದು * ಬರವಣಿಗೆ ಪೂರಕ ಅಭ್ಯಾಸ | ವಾಲ್ ಸ್ಲೇಟ್ | ಶಿಕ್ಷಕ | ಮಕ್ಕಳು ವಾಲ್‌ಸ್ಲೇಟ್‌ನಲ್ಲಿ ರೇಖಾಭ್ಯಾಸ ಮಾಡಲು ತಿಳಿಸುವರು. (ಹಿಂದಿನ ತರಗತಿಯ ಅಭ್ಯಾಸ), | ಕನ್ನಡ ಆಪತ್ತಿಗಾದವನು | ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವುದು. * ಸರಳ ವಿವರಣಾತ್ಮಕ ವಾಕ್ಯಗಳನ್ನು ಬರೆಯುವುದು. | ಪಠ್ಯ ಪುಸ್ತಕ | ಶಿಕ್ಷಕ | ಮನೆಯಲ್ಲಿ ನಕಲು ಮಾಡಿಕೊಂಡು ಬಂದ ಪಾಠಭಾಗವನ್ನು ಪರಿಶೀಲಿಸುವರು. ಪಠ್ಯಪುಸ್ತಕದ ಪುಟಸಂಖ್ಯೆ 34ನ್ನು ತೆರೆಯಲು ಸೂಚಿಸುವುದು. |
| | 30 ನಿ | | | ಪಠ್ಯ ಪುಸ್ತಕ | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | ನೋಟ್ ಪುಸ್ತಕ ಪೆನ್ | ಶಿಕ್ಷಕ | ಪುಟಸಂಖ್ಯೆ 34ರಲ್ಲಿ ""ಈ ಕಾಡಿನಲ್ಲಿ........................ ...................................................... ಹೊರಟೇ ಬಿಟ್ಟಿತು" ವರೆಗೆ ಗದ್ಯವನ್ನು ಸ್ವರಭಾರದೊಂದಿಗೆ ಓದುವುದು. ಮಕ್ಕಳು ಪಾಠವನ್ನು ಗಮನಿಸುತ್ತಾ ಆಲಿಸುವರು. ಶಿಕ್ಷಕರು ಪ್ರತಿ ಮಕ್ಕಳಿಂದ ಎರಡು ಅಥವಾ ಮೂರು ವಾಕ್ಯಗಳನ್ನು ಓದಿಸುವರು. ಮಕ್ಕಳು ಮಾದರಿ ಓದನ್ನು ಅನುಕರಿಸಿ ಓದುವಂತೆ ಅಗತ್ಯ ಸಹಾಯ ಮಾಡುವರು. ಈ ಪಾಠ ಭಾಗಕ್ಕೆ ಸಂಬಂಧಿಸಿದಂತೆ ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು ಹಾಗೂ ಪಠ್ಯ ಭಾಗವನ್ನು ಅರ್ಥೈಸಿಕೊಳ್ಳಲು ಸಹಾಯ ಮಾಡುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು ಅಗತ್ಯ ಮಾರ್ಗದರ್ಶನ ಪ್ರೋತ್ಸಾಹ ನೀಡುವರು. | | | | ಶಿಕ್ಷಕ | ಮೇಲೆ ಬೋಧಿಸಲಾದ ಪಾಠ ಭಾಗವನ್ನು ವಿದ್ಯಾರ್ಥಿಗಳು ನಕಲು ಮಾಡಲು ತಿಳಿಸುವರು. |
| | 30 ನಿ | | | | ಶಿಕ್ಷಕ | "ಒಗ್ಗಟ್ಟಿನಲ್ಲಿ ಬಲವಿದೆ' ಪಾಠಕ್ಕೆ ಸಂಬಂಧಿಸಿದಂತೆ ಕಥೆಯನ್ನು ಹೇಳುವರು. ನಂತರ ಪಠ್ಯಭಾಗವನ್ನು ಸೂಕ್ತ ಸ್ವರಭಾರಗಳೊಂದಿಗೆ ಅಭಿನಯ ಪೂರ್ವಕವಾಗಿ ವಾಚನ ಮಾಡುವರು. | | | | ಸ್ವಕಲಿಕೆ | ಮೇಲೆ ಹೇಳಲಾದ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | ಮುಂದಿನ ಅವಧಿಗೆ ಸಿದ್ಧತೆ ಮಾಡಿಕೊಳ್ಳುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ಪ್ರಶಂಸಿಸುವರು. |

""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 (M-10) | 10 ನಿ | ಗಣಿತ ಸಂಖ್ಯೆಗಳು | * 6 ರಿಂದ 10ರ ವರೆಗಿನ ಸಂಖ್ಯೆಗಳನ್ನು ಓದುವುದು, ಗುರುತಿಸುವುದು ಮತ್ತು ಬರೆಯುವುದು. | ಡ್ರಾಯಿಂಗ್ ಹಾಳೆ, ಸ್ಕೆಚ್‌ಪೆನ್ | ಶಿಕ್ಷಕ | ಶಿಕ್ಷಕರು, ಮಕ್ಕಳಿಗೆ ಅವಶ್ಯಕವಾದ ಅಳತೆಯ ಡ್ರಾಯಿಂಗ್ ಹಾಳೆಯನ್ನು ಕತ್ತರಿಸಿ ವಿತರಿಸುವರು. ಕ್ರಮವಾಗಿ ಮಕ್ಕಳನ್ನು ಗುಂಪು ಮಾಡಿ, ಸ್ಕೆಚ್ ಪೆನ್ನು ಹಾಗೂ ಇತರ ವಸ್ತುಗಳನ್ನು ವಿತರಿಸುವರು. ಪ್ರತಿ ಮಗುವಿಗೂ ತಲಾ 20 ಕತ್ತರಿಸಿದ ಡ್ರಾಯಿಂಗ್ ಹಾಳೆ ಕಾರ್ಡ್ ಕೊಟ್ಟು, ಪ್ರತಿ ಕಾರ್ಡ್‌ನಲ್ಲಿ 1 ರಿಂದ 9ರ ಸಂಖ್ಯೆಗಳನ್ನು ಹಾಗೂ ಕನ್ನಡದ ವರ್ಣಮಾಲೆಯ ಯಾವುದಾದರೂ 1 ಒಂದು ಅಕ್ಷರವನ್ನು ಉಳಿದ 11 ಕಾರ್ಡ್‌ಗಳಲ್ಲಿ ಬರೆಯುವಂತೆ ಸೂಚನೆ ನೀಡುವರು. | ಗಣಿತ ಸಂಖ್ಯೆಗಳು | * ಎರಡಂಕಿ ಇರುವ ಸಂಖ್ಯೆಗಳಲ್ಲಿ ಬಿಡಿ ಮತ್ತು ಹತ್ತರ ಸ್ಥಾನಗಳನ್ನು ಗುರುತಿಸುವುದು ಹಾಗೂ ಹತ್ತರ ಗುಂಪು ಬಿಡಿಗಳಾಗಿ ಬಿಡಿಸಿ ಬರೆಯುವುದು. | ಡ್ರಾಯಿಂಗ್ ಹಾಳೆ ಸ್ಕೆಚ್‌ಪೆನ್ | ಶಿಕ್ಷಕ | ಮಕ್ಕಳಿಗೆ 12 x4 ಸೆಂ.ಮೀ. ಅಳತೆಯಲ್ಲಿ ಕತ್ತರಿಸಿದ ಡ್ರಾಯಿಂಗ್ ಹಾಳೆ, ಸ್ಕೆಚ್ ಪೆನ್ ಕೊಟ್ಟು ಪ್ರತಿ ಹಾಳೆಗೂ Border ಎಳೆಯುವಂತೆ ಸೂಚನೆ ನೀಡುವರು. |
| | 25 ನಿ | | | | ಹಿರೇಮಣಿ | ಮಕ್ಕಳು ಚಟುವಟಿಕೆಯಲ್ಲಿ ತೊಡಗುವರು. ಹಿರೇಮಣಿಯು ಮಕ್ಕಳು ಸ್ಪಷ್ಟವಾಗಿ ಬರೆಯುವಂತೆ ಸಹಾಯ ಮಾಡುವನು. | | | | ಶಿಕ್ಷಕ | ಶಿಕ್ಷಕರು ಪಠ್ಯಪುಸ್ತಕದ ಪುಟ – 29ರಲ್ಲಿ ಇರುವಂತೆ ಮಕ್ಕಳಿಂದ ಸ್ಥಾನಬೆಲೆ ಮಿಂಚುಪಟ್ಟಿಯನ್ನು ತಯಾರಿಸುವರು. (ಮಕ್ಕಳಿಗೆ ನಿರ್ದೇಶನ ನೀಡುವರು) [1 ರಿಂದ 99]. |
| | 10 ನಿ | | | | ಶಿಕ್ಷಕ | ಮಕ್ಕಳು ತಯಾರಿಸಿದ ಅಕ್ಷರಗಳ ಮಿಂಚುಪಟ್ಟಿಗಳನ್ನು ತಾವು ಸಂಗ್ರಹಿಸಿಟ್ಟುಕೊಳ್ಳುವರು ಹಾಗೂ ಉಳಿದ 1 ರಿಂದ 9ರವರೆಗಿನ ಮಿಂಚುಪಟ್ಟಿಗಳನ್ನು ತಮ್ಮ ಮುಂದೆ ಜೋಡಿಸಿ ಇಟ್ಟುಕೊಳ್ಳುವಂತೆ ಸೂಚನೆ ನೀಡುವರು.<br>ಉದಾ : 1 8 5<br>3 2 7<br>6 4 9 | | | | ಶಿಕ್ಷಕ | ಮಕ್ಕಳು ತಯಾರಿಸಿದ ಮಿಂಚುಪಟ್ಟಿಗಳನ್ನು ಪರಿಶೀಲಿಸುವರು, ಶಿಕ್ಷಕರು, ಮಕ್ಕಳ ಗುಂಪುಗಳನ್ನು ಮಾಡಿ, ಮಿಂಚುಪಟ್ಟಿಗಳನ್ನು ಬಳಸಿ, ಒಬ್ಬರು ತಮ್ಮ ಗುಂಪಿನ ಇತರೆ ವಿದ್ಯಾರ್ಥಿಗಳಿಂದ ಸ್ಥಾನ ಹಾಗೂ ಸ್ಥಾನಬೆಲೆಗಳನ್ನು ಹೇಳಿಸಿ, ಅವರು ತಪ್ಪಿದಲ್ಲಿ ತಿದ್ದಿ ಹೇಳಿಸುವಂತೆ ಸೂಚನೆ ನೀಡುವರು. |
| | 30 ನಿ | | | ವಿವಿಧ ಬೇಳೆ ಕಾಳುಗಳು, ಮಿಂಚು ಪಟ್ಟಿಗಳು | ಶಿಕ್ಷಕ | ಪ್ರತಿ ಮಗುವಿಗೆ ವಿವಿಧ ಕಾಳುಗಳನ್ನು ಕೊಟ್ಟು ತಾವು ಜೋಡಿಸಿಕೊಂಡ ಕಾರ್ಡ್‌ಗಳ ಮೇಲೆ ಸಂಖ್ಯೆಗಳಿಗೆ ಅನುಗುಣವಾಗಿ ಕಾಳುಗಳನ್ನು ಜೋಡಿಸುವ ಚಟುವಟಿಕೆಯನ್ನು ಶಿಕ್ಷಕರು ಮಾಡಿಸುವರು. | | | ಸ್ಥಾನ ಬೆಲೆ ಮಿಂಚು ಪಟ್ಟಿಗಳು (1 ರಿಂದ 99) | ಹಿರೇಮಣಿ | ಮಕ್ಕಳು ಹಿರೇಮಣಿಯ ನೇತೃತ್ವದಲ್ಲಿ ಮೌಲ್ಯಮಾಪನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | | ಶಿಕ್ಷಕರು ಮಕ್ಕಳು ಜೋಡಿಸಿದ, ಕಾಳುಗಳನ್ನು ಗಮನಿಸಿ, ತಪ್ಪಿದ್ದಲ್ಲಿ ಎಣಿಸಿ ತಿದ್ದಲು ತಿಳಿಸುವರು. | | | | | ಶಿಕ್ಷಕರು ಸ್ಥಾನಬೆಲೆಯನ್ನು ಗುರುತಿಸುವಲ್ಲಿ ತೊಡಕಿರುವ ಮಕ್ಕಳಿಗೆ ಹೆಚ್ಚಿನ ಗಮನಕೊಟ್ಟು ತಿದ್ದುವರು ಹಾಗೂ ಅವರ ಸಹಪಾಠಿಗಳಿಂದ ಸಹಾಯ ಪಡೆದು ಹೆಚ್ಚಿನ ಅಭ್ಯಾಸದಲ್ಲಿ ತೊಡಗುವಂತೆ ಸೂಚನೆ ನೀಡುವರು. |

""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 EVS-10 | 10 ನಿ | ಪರಿಸರ ಅಧ್ಯಯನ<br>ಪ್ರಾಣಿ ಮತ್ತು ಸಸ್ಯಗಳೊಡನೆ ಸ್ನೇಹ | ಸಸ್ಯಗಳ ಮತ್ತು ಪ್ರಾಣಿಗಳ ಪಾಲನೆ ಮತ್ತು ರಕ್ಷಣೆ ಕುರಿತು ತಿಳಿಯುವರು | | ಶಿಕ್ಷಕ | ಎರಡನೇ ತರಗತಿಯ ಮಕ್ಕಳ ಚಟುವಟಿಕೆಯಲ್ಲಿ ಭಾಗವಹಿಸಲು ಸೂಚಿಸುವರು. | ಪರಿಸರ ಅಧ್ಯಯನ<br>ಪ್ರಾಣಿ, ಸಸ್ಯಗಳ ಪಾಲನೆ | ಸಸ್ಯ ಮತ್ತು ಪ್ರಾಣಿಗಳನ್ನು ಪಾಲನೆ ಮಾಡುವ ಮತ್ತು ರಕ್ಷಿಸುವ ಅಭ್ಯಾಸಗಳನ್ನು ಮಾಡಿಕೊಳ್ಳುವರು. | | ಶಿಕ್ಷಕ | ನಿರ್ದೇಶನ ಆಟ ಆಡಿಸಲು ಸಿದ್ಧತೆ ನಡೆಸಿಕೊಳ್ಳುವರು.<br>ಸಸ್ಯ ಹೆಸರಿಸಲು ತಿಳಿಸುವರು ಹಾಗೂ ಒಂದು ಉಪಯೋಗಕ್ಕೆ ಬದಲಾಗಿ ಒಂದಕ್ಕಿಂತ ಹೆಚ್ಚು ಉಪಯೋಗಗಳನ್ನು ಹೇಳಲು ತಿಳಿಸಿ ನಿರ್ದೇಶನ ಆಟ ಆಡಿಸುವರು. |
| | 30 ನಿ | | | | ಶಿಕ್ಷಕ | ಎರಡನೇ ತರಗತಿ ಮಕ್ಕಳ ಚಟುವಟಿಕೆಯಲ್ಲಿ ಭಾಗವಹಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಗೆ ಅಗತ್ಯ ನಿರ್ದೇಶನಗಳನ್ನು ನೀಡುತ್ತಾ ಎಲ್ಲಾ ಮಕ್ಕಳು ಚಟುವಟಿಕೆಯಲ್ಲಿ ತೊಡಗುವಂತೆ ಮಾಡುವರು. |
| | 30 ನಿ | | | ಸಸ್ಯಗಳು | ಶಿಕ್ಷಕ | ಪರಿಚಿತ ಸಸ್ಯಗಳನ್ನು ಪ್ರದರ್ಶಿಸಿ ಒಂದೊಂದರ ಹೆಸರು ಹೇಳಿಸುವರು ಹಾಗೂ ಅವುಗಳ ಉಪಯೋಗ ಹೇಳಿಸುತ್ತಾ ಅವುಗಳ ರಕ್ಷಣೆಯ ಮಹತ್ವ ತಿಳಿಸುವರು.<br>""ಹೀಗೆ ಮಾಡು" ""ಹೀಗೆ ಮಾಡಬೇಡ" ಸಸ್ಯಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಮಾಡಿಸುವರು. | | | | ಶಿಕ್ಷಕ | 1ನೇ ತರಗತಿ ಮಕ್ಕಳ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 10 ನಿ | | | ಒಣಗುತ್ತಿರುವ ಸಸ್ಯದ ಚಿತ್ರಗಳು | | ಸಸ್ಯಗಳು ಒಣಗುತ್ತಿದ್ದರೆ ನೀವು ಏನು ಮಾಡುವಿರಿ ? ಈ ಪ್ರಶ್ನೆಗೆ ವೈಯಕ್ತಿಕವಾಗಿ ಉತ್ತರ ಪಡೆಯುವರು.<br>**ಸೂಚನೆ : ಎರಡೂ ತರಗತಿಯ ಸಾಮರ್ಥ್ಯಗಳಲ್ಲಿ ಸಾಮ್ಯತೆಯಿದ್ದು ಬಹುತೇಕ ಹೊಂದಾಣಿಕೆಯ ತರಗತಿ ಇರುತ್ತದೆ.** | | | ಪಠ್ಯ ಪುಸ್ತಕ | ಶಿಕ್ಷಕ | ಶಿಕ್ಷಕರು ಪುಟ – 13ರ ಸಸ್ಯಗಳಿಂದ ನಮಗೆ ಏನು ಪ್ರಯೋಜನ ?<br>ಸಸ್ಯಗಳನ್ನು ಕೀಳಬಾರದು ಏಕೆ ? ಈ ಪ್ರಶ್ನೆಗಳಿಗೆ ನೋಟ್ ಪುಸ್ತಕದಲ್ಲಿ ಉತ್ತರ ಬರೆಯಲು ತಿಳಿಸುವರು. |

**""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | | | | | ಕಲಿಕಾ ಪ್ರಕ್ರಿಯೆ | | | | | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 | | | **ಸೂಚನೆ :** ಸಾ.ಉ.ಉ.ಕಾ.ದ ಎಲ್ಲಾ ವಿಷಯಾಂಶಗಳು ಹಾಗೂ ಸಾಮರ್ಥ್ಯಗಳು ಸಂಪೂರ್ಣ ಸಹ ಸಂಬಂಧ ಹೊಂದಿರುವುದರಿಂದ ಎರಡೂ ತರಗತಿಗಳೂ ಒಟ್ಟುಗೂಡಿ ಚಟುವಟಿಕೆಯಲ್ಲಿ ತೊಡಗುವರು. | | | | | | | | |
| | 10 ನಿ | ಸಾ.ಉ.ಉ.ಕಾ. "ಕೈ' ಚಿತ್ರ ಬರೆದು ಭಾಗಗಳನ್ನು ಗುರ್ತಿಸುವರು. | | | | ಎರಡನೇ ತರಗತಿಯ ಮಕ್ಕಳೊಂದಿಗೆ, ಸೂಚಿತ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | ಸಾ.ಉ.ಉ. ಕಾರ್ಯ ""ಕೈ (ಹಸ್ತ) ಚಿತ್ರ ಬರೆದು ಭಾಗಗಳನ್ನು ಗುರುತಿಸುವರು. | * ಆಕಾರವನ್ನು ಅನುಸರಿಸಿ, ಹೆಬ್ಬೆರಳಿನಿಂದ ಚಿತ್ರ ರಚಿಸುವ ಸಾಮರ್ಥ್ಯ ಬೆಳೆಸುವುದು. | ಡ್ರಾಯಿಂಗ್ ಹಾಳೆ ಸ್ಕೆಚ್‌ಪೆನ್ | ಶಿಕ್ಷಕ | ಮೊದಲಿಗೆ ಶಿಕ್ಷಕರು ಎಲ್ಲಾ ವಿದ್ಯಾರ್ಥಿಗಳನ್ನು ವೃತ್ತಾಕಾರವಾಗಿ ಕೂರಿಸಿ. ವಿದ್ಯಾರ್ಥಿಗಳಿಗೆ ಕತ್ತರಿಸಿದ (10 x 10 ಸೆಂ.ಮೀ ) ಡ್ರಾಯಿಂಗ್ ಹಾಳೆಗಳನ್ನು ನೀಡುವರು. ಸ್ಕೆಚ್ ಪೆನ್ನುಗಳನ್ನು ಕೊಡುವರು. |
| | 10 ನಿ | | | | | | | | | ಶಿಕ್ಷಕ | ನಂತರ ಶಿಕ್ಷಕರು ಒಂದು ಡ್ರಾಯಿಂಗ್ ಹಾಳೆ ಬಳಸಿ, ಅದರ ಮೇಲೆ ತಮ್ಮ ಕೈಯನ್ನಿಟ್ಟು, ಅದರ ಆಕಾರವನ್ನು ಅನುಸರಿಸಿ ಚಿತ್ರ ಬರೆದು, ಅದನ್ನು ಬರೆಯುವ ವಿಧಾನವನ್ನು ವಿವರಿಸುತ್ತಾ, ಮಕ್ಕಳಿಗೆ ಗಮನಿಸುವಂತೆ ಸೂಚಿಸುವರು. |
| | 10 ನಿ | | | | | | | | | ಶಿಕ್ಷಕ | ಈಗ ಪ್ರತಿ ತರಗತಿಯಿಂದ ತಲಾ 1 ಅಥವಾ 2 ಮಕ್ಕಳನ್ನು ಕರೆದು ಇದೇ ರೀತಿ ಬರೆಯಲು ಸೂಚಿಸಿ ಮಕ್ಕಳಿಗೆ ಅದನ್ನು ಸೂಕ್ತವಾಗಿ ಗುರುತಿಸಲು ತಿಳಿಸುವರು. ಮಕ್ಕಳು ಬರೆದ ಮಾದರಿ ಚಿತ್ರವನ್ನು ತರಗತಿಯಲ್ಲಿ ಪ್ರದರ್ಶಿಸುವರು. |
| | 30 ನಿ | | | | | | | | ಡ್ರಾಯಿಂಗ್ ಹಾಳೆ ಸ್ಕೆಚ್‌ಪೆನ್ | | ಈಗ ಮಕ್ಕಳಿಗೆ ಅವಶ್ಯಕ ಸೂಚನೆ ನೀಡುತ್ತಾ, ಅವರಿಗೂ ತಮ್ಮ ಕೈಯ ಆಕಾರ ಅನುಸರಿಸಿ, ಚಿತ್ರ ಬರೆಯುವಂತೆ ಆದೇಶ ನೀಡುವರು.<br>ನಂತರ 2ನೇ ತರಗತಿಯ ಕೆಲವು ವಿದ್ಯಾರ್ಥಿಗಳಿಗೆ ಕೈಯಲ್ಲಿನ ಗೆರೆಗಳನ್ನು ಬರೆದು ಬೆರಳುಗಳನ್ನು ಹೆಸರಿಸುವಂತೆ ಸೂಚಿಸುವರು. |
| | 10 ನಿ | | | | | | | | | | ಮಕ್ಕಳು ಬರೆದ ಚಿತ್ರಗಳನ್ನು ನೋಡಿ, ಅವರು ಹೆಸರಿಸಿರುವ ವಿಧಾನ ಗಮನಿಸಿ, ಅವಶ್ಯಕವಿದ್ದಲ್ಲಿ ಅದನ್ನು ತಿದ್ದಿ, ಮಾರ್ಗದರ್ಶನ ನೀಡುವರು. (ಸಮಯವಿದ್ದಲ್ಲಿ, ಕೈಯ ಆಕೃತಿಯಿಂದ ನವಿಲನ್ನು ಬಿಡಿಸುವ ವಿಧಾನವನ್ನೂ ಪರಿಚಯಿಸಬಹುದು). |
| | 10 ನಿ | | | | | | | | | | ಕೊನೆಯಲ್ಲಿ ವಿದ್ಯಾರ್ಥಿಗಳು ತಯಾರಿಸಿದ ಕಾರ್ಡ್‌ಗಳನ್ನು ತರಗತಿಯ ಒಂದು ಬದಿಯಲ್ಲಿ ಜೋಡಿಸಿ, ಅವುಗಳನ್ನು ಪ್ರದರ್ಶಿಸುವರು ಹಾಗೂ ಉತ್ತಮ ಕಾರ್ಡ್‌ಗಳನ್ನು ಗುರುತಿಸಿ, ಚಪ್ಪಾಳೆಯ ಮೂಲಕ ಪ್ರಶಂಸಿಸುವರು. |

""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 Kan-17 | 10 ನಿ | ಕನ್ನಡ<br>ಒಗ್ಗಟ್ಟಿನಲ್ಲಿ ಬಲವಿದೆ ಮತ್ತು ರೇಖಾಭ್ಯಾಸ | * ಹೇಳಲಾದ ಪದ್ಯದಲ್ಲಿನ ಮಾಹಿತಿಯನ್ನು ನೆನಪಿಸಿಕೊಳ್ಳುವುದು<br>* ಬರವಣಿಗೆಗೆ ಪೂರಕ ಅಭ್ಯಾಸ | ಪಠ್ಯ ಪುಸ್ತಕ | ಶಿಕ್ಷಕ | ಮಕ್ಕಳು ಬರೆದು ತಂದ ರೇಖಾಭ್ಯಾಸದ ಹಾಳೆಗಳನ್ನು ತೆರೆಯಲು ಸೂಚಿಸುವರು ಹಾಗೂ ಕಲಿಕೆಗೆ ಅಗತ್ಯ ಸೂಚನೆಗಳನ್ನು ನೀಡಿ ಸಿದ್ಧತೆ ಮಾಡಿಕೊಳ್ಳುವರು. | ಕನ್ನಡ<br>ಆಪತ್ತಿಗಾದವನು | * ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವುದು<br>ಸರಳ ವಿವರಣಾತ್ಮಕ ವಾಕ್ಯಗಳನ್ನು ಬರೆಯುವುದು. | ಪಠ್ಯ ಪುಸ್ತಕ | ಶಿಕ್ಷಕ | ಈ ಹಿಂದಿನ ತರಗತಿಯಲ್ಲಿ ಬೋಧಿಸಲಾದ ಪಾಠ ಭಾಗವನ್ನು ಹಿರೇಮಣಿಯ ನೇತೃತ್ವದಲ್ಲಿ ವಾಚನ ಮಾಡಿಸಲು ತಿಳಿಸುವರು. |
| | 40 ನಿ | | | | ಶಿಕ್ಷಕ | * ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿಕೊಂಡು ಮಕ್ಕಳು ಬರೆದು ತಂದಿರುವ ರೇಖಾಭ್ಯಾಸವನ್ನು ಪರಿಶೀಲಿಸುವರು. ತಮ್ಮ ಮಾರ್ಗದರ್ಶನದಲ್ಲಿ ಪುಟಸಂಖ್ಯೆ 15 ಮತ್ತು 16ರ ಅಭ್ಯಾಸ ಹಾಳೆಗಳನ್ನು ಸ್ಥಳದಲ್ಲಿಯೇ ಭರ್ತಿಮಾಡಲು ಸಹಾಯ ಮಾಡಿ ಪೂರ್ಣಗೊಳಿಸುವರು.<br><br>* ಪುಟ 17 ರ ರೇಖಾಭ್ಯಾಸವನ್ನು ಬರೆಯುವ ಕ್ರಮವನ್ನು ವಾಲ್ ಸ್ಲೇಟ್ ಮೇಲೆ ಬರೆದು ತೋರಿಸಿ ಕೊಡುವರು ಹಾಗೂ ವಿದ್ಯಾರ್ಥಿಗಳಿಂದ ಅದನ್ನು ಒಮ್ಮೆ ಅಥವಾ ಎರಡು ಬಾರಿ ಬರೆಸಿ ಸರಿಯಾದ ಕ್ರಮದಲ್ಲಿ ಬರೆಯಲು ಅಗತ್ಯ ಮಾರ್ಗದರ್ಶನ ಮಾಡಿ ಸರಿ ಕ್ರಮವನ್ನು ದೃಢಪಡಿಸಿಕೊಳ್ಳುವರು. | | | | ಹಿರೇಮಣಿ | ಪ್ರತಿ ವಿದ್ಯಾರ್ಥಿಯಿಂದ ಪಾಠ ಭಾಗವನ್ನು ಓದಿಸುವನು ಹಾಗೂ ಮಕ್ಕಳ ಓದಿನಲ್ಲಿ ಉಂಟಾದ ದೋಷಗಳನ್ನು ಗುರುತು ಮಾಡಿಕೊಳ್ಳುವನು. |
| | 10 ನಿ | | | | ಶಿಕ್ಷಕ | ಮೇಲೆ ಹೇಳಿಕೊಟ್ಟ ರೇಖಾಭ್ಯಾಸವನ್ನು ವಾಲ್‌ಸ್ಲೇಟ್‌ನಲ್ಲಿ ಅಭ್ಯಾಸ ಮಾಡಲು ತಿಳಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸುವರು. |
| | 20 ನಿ | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು.<br><br>**ಸೂಚನೆ :** 1ನೇ ತರಗತಿಯ ಮಕ್ಕಳ ಚಟುವಟಿಕೆಯನ್ನು ಪರಿಶೀಲಿಸುವುದು. | | | | ಶಿಕ್ಷಕ | ಮೇಲಿನ ಚಟುವಟಿಕೆಯಲ್ಲಿ ಸರಿಯಾಗಿ ಓದಲು ಬಾರದ ಮಕ್ಕಳನ್ನು ಶಿಕ್ಷಕರು ಓದಿಸುವರು. ನಂತರ ವಿದ್ಯಾರ್ಥಿಗಳು ನಕಲು ಮಾಡಿ ತಂದ ಪಾಠ ಭಾಗವನ್ನು ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡುವರು. |

""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| | | | **ಸೂಚನೆ :** ಜೀವನ ವಿಜ್ಞಾನದ ಸಾಮರ್ಥ್ಯಗಳು ಒಂದು ಹಾಗೂ ಎರಡನೇ ತರಗತಿಗೆ ಸಂಪೂರ್ಣ ಸಹಸಂಬಂಧ ಹೊಂದುವುದರಿಂದ ಎರಡೂ ತರಗತಿಯ ಮಕ್ಕಳು ಒಟ್ಟಿಗೆ ಚಟುವಟಿಕೆಯಲ್ಲಿ ತೊಡಗುವರು. | | | | | | | | |
| 2 | 20 ನಿ | ಜೀವನ ವಿಜ್ಞಾನ<br>ದೈಹಿಕ ಸ್ವಚ್ಛತೆಯ ಪ್ರಾಮುಖ್ಯತೆ | * ದೈಹಿಕ ಸ್ವಚ್ಛತೆ ಮತ್ತು ಸ್ವಚ್ಛ ಉಡುಪನ್ನು ಧರಿಸುವ ಪ್ರಾಮುಖ್ಯತೆಯನ್ನು ಅರಿಯುವರು. | | ಶಿಕ್ಷಕ | ಮೊದಲಿಗೆ ಶಿಕ್ಷಕರು ಎರಡೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ, ""ಗಾಳಿ ಬಂತು ಗಾಳಿ ಇದ್ದಬದ್ದವರನ್ನೆಲ್ಲಾ" ಎಂಬ ಆಟ ಆಡಿಸುವರು. | | | | | |
| | 20 ನಿ | | | | ಶಿಕ್ಷಕ | ನಂತರ ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ, ಅವರ ಉಡುಪುಗಳ ಸ್ವಚ್ಛತೆಯನ್ನು ಶಿಕ್ಷಕರು ಪರಿಶೀಲಿಸಿ, ಸ್ವಚ್ಛ ಉಡುಪು ಹಾಗೂ ದೈಹಿಕ ಸ್ವಚ್ಛತೆಯನ್ನು ಹೊಂದಿರುವ ಮಕ್ಕಳನ್ನು ಗುರುತಿಸಿ, ಅವರನ್ನು ಗಮನಿಸಲು, ಇತರ ವಿದ್ಯಾರ್ಥಿಗಳಿಗೆ ಸೂಚಿಸುವರು. ಇತರ ಮಕ್ಕಳ ದೈಹಿಕ ಸ್ವಚ್ಛತೆ ಪರಿಶೀಲಿಸುವರು. | | | | | |
| | 20 ನಿ | | | | ಶಿಕ್ಷಕ | ಶಿಕ್ಷಕರು, ಉಡುಪುಗಳ ಸ್ವಚ್ಛತೆ, ಅದರ ಪ್ರಾಮುಖ್ಯತೆಯ ಬಗ್ಗೆ ವಿವರಿಸುವರು. ಆರೋಗ್ಯಕರ ಅಭ್ಯಾಸಗಳು ಯಾವುವು ಮತ್ತು ಉಡುಪುಗಳನ್ನು ಹೇಗೆ ಸ್ವಚ್ಛವಾಗಿಡಬೇಕು ಎಂಬುದನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡುವರು. | | | | | |
| | 20 ನಿ | | | | ಶಿಕ್ಷಕ | ಕೊನೆಯಲ್ಲಿ ಶಿಕ್ಷಕರು, ಮಕ್ಕಳಿಂದ ಆರೋಗ್ಯಕರ ಅಭ್ಯಾಸಗಳ ಬಗ್ಗೆ ಹಾಗೂ ಉಡುಪುಗಳ ಸ್ವಚ್ಛತೆಯ ಬಗ್ಗೆ ಗಮನಿಸಬೇಕಾದ ಅಂಶಗಳನ್ನು ಪಟ್ಟಿ ಮಾಡಿಸುವರು.<br>ಹಾಗೂ ತಾವು ಇನ್ನು ಮುಂದೆ ಸ್ವಚ್ಛ ಉಡುಪು ಧರಿಸುವರು ಹಾಗೂ ದೈಹಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವರು ಎಂದು ಪ್ರಮಾಣ ಮಾಡಿಸುವರು. | | | | | |

""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 EVS-11 | 05 ನಿ | ಪರಿಸರ ಅಧ್ಯಯನ ಪ್ರಾಣಿ ಮತ್ತು ಸಸ್ಯಗಳೊಡನೆ ಸ್ನೇಹ | ಸಸ್ಯಗಳ ಮತ್ತು ಪ್ರಾಣಿಗಳ ಪಾಲನೆ ಮತ್ತು ರಕ್ಷಣೆ ಕುರಿತು ತಿಳಿಯುವರು. | ಮಿಂಚು ಪಟ್ಟಿಗಳು ಪ್ರಾಣಿಗಳ ಚಿತ್ರಪಟ | ಶಿಕ್ಷಕರು | 1 ಮತ್ತು 2ನೇ ತರಗತಿಯ ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿಕೊಂಡು ಅಗತ್ಯ ಕಲಿಕಾ ಸಾಮಗ್ರಿಗಳೊಂದಿಗೆ ಬೋಧನೆಗೆ ತಯಾರಿ ಮಾಡಿಕೊಳ್ಳುವರು. | ಪರಿಸರ ಅಧ್ಯಯನ ಪ್ರಾಣಿ, ಸಸ್ಯಗಳ ಪಾಲನೆ | ಸಸ್ಯ ಮತ್ತು ಪ್ರಾಣಿಗಳನ್ನು ಪಾಲನೆ ಮಾಡುವ ಮತ್ತು ರಕ್ಷಿಸುವ ಅಭ್ಯಾಸಗಳನ್ನು ಮಾಡಿಕೊಳ್ಳುವರು. | ಪಠ್ಯ ಪುಸ್ತಕ | ಶಿಕ್ಷಕ | 1ನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ತೊಡಗಿರುವರು. |
| | 50 ನಿ | | | | ಶಿಕ್ಷಕರು | * ಮಕ್ಕಳು ತಮ್ಮ ಮನೆಯಲ್ಲಿ ಯಾವ ಯಾವ ಪ್ರಾಣಿಗಳನ್ನು ಸಾಕಿದ್ದಾರೆ ? ಅವುಗಳನ್ನು ಪ್ರತಿ ಮಗುವಿನಿಂದ, ಪ್ರತಿ ಸಾಕು ಪ್ರಾಣಿಯಿಂದ ಇರುವ ಎಲ್ಲಾ ಉಪಯೋಗಗಳನ್ನು ಹೇಳಿಸುವರು ಹಾಗೂ ಪ್ರಶ್ನಿಸುತ್ತಾ ಉಪಯೋಗಗಳನ್ನು ಮನದಟ್ಟು ಮಾಡುವರು.<br>* ಈ ಪ್ರಾಣಿಗಳು ಇಲ್ಲದಿದ್ದರೆ ನಮಗೆ ಆಗುತ್ತಿದ್ದ ಅನಾನುಕೂಲಗಳನ್ನು ಕೇಳುವರು. ನಂತರ ಅವುಗಳ ಮಹತ್ವ ತಿಳಿಸಿಕೊಟ್ಟು ಪ್ರಶ್ನೆಯ ಮೂಲಕ ಪ್ರಾಣಿಗಳನ್ನು ಹೇಗೆ ರಕ್ಷಿಸಬೇಕು ? ಹೇಗೆ ಪಾಲನೆ ಮಾಡಬೇಕು ಎಂಬುದನ್ನು ಮನವರಿಕೆ ಮಾಡುವರು. | | | | | 1ನೇ ತರಗತಿ ಮಕ್ಕಳ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 05 ನಿ | | | | ಶಿಕ್ಷಕ | ಪಠ್ಯ ಪುಸ್ತಕದ ಪುಟ 12 ಮತ್ತು 13ರ ಚಿತ್ರಗಳನ್ನು ಗುರುತಿಸಿ ವಿವಿಧ ಪ್ರಾಣಿಗಳ ಉಪಯೋಗ ಪಟ್ಟಿ ಮಾಡಿ ಅವುಗಳನ್ನು ಹೇಗೆ ರಕ್ಷಿಸಬೇಕು ಎಂಬುದನ್ನು ಹಿರೇಮಣಿಯ ನೇತೃತ್ವದಲ್ಲಿ ಹೇಳಿಸುವಂತೆ ತಿಳಿಸುವರು. | | | | ಶಿಕ್ಷಕ | ಪಠ್ಯಪುಸ್ತಕವನ್ನು ಬಳಸಿ ಪುಟ 10 ಮತ್ತು 11ರ ಚಿತ್ರಗಳಲ್ಲಿರುವ ಪ್ರಾಣಿಗಳು ಮತ್ತು ಅವುಗಳ ಉಪಯೋಗವನ್ನು ಪಠ್ಯಪುಸ್ತಕ ಓದುತ್ತಾ ಅಭ್ಯಾಸ ಮಾಡಿಸುವರು. |
| | 20 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | | |
| | | | | | ಶಿಕ್ಷಕ | 1ನೇ ತರಗತಿಯ ಚಟುವಟಿಕೆ ಪರಿಶೀಲಿಸಿ ಮುಂದಿನ ತರಗತಿಯ ಸಿದ್ಧತೆಯಲ್ಲಿ ತೊಡಗುವರು. | | | | | |

""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

ದಿನ - 15

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ಸಾಮರ್ಥ್ಯ / ಚಟುವಟಿಕೆ | ಕಲಿಕಾ ಫಲ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ಸಾಮರ್ಥ್ಯ / ಚಟುವಟಿಕೆ | ಕಲಿಕಾ ಫಲ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 | | ಸಾ.ಉ.ಉ.ಕಾ ಕೈ-ಬೆರಳನ್ನು ಬಳಸಿ ಚಿತ್ರ ಬರೆಯುವುದು. | * ಕೈ-ಬೆರಳುಗಳ ಅಚ್ಚುಗಳ ಅನುಗುಣವಾಗಿ ವಿವಿಧ ಚಿತ್ರಗಳನ್ನು ಸಂಯೋಜಿಸುವುದನ್ನು ಕಲಿಯುವರು. | **ಸೂಚನೆ :** ಸಾ.ಉ.ಉ.ಕಾರ್ಯದ ಎಲ್ಲಾ ಸಾಮರ್ಥ್ಯಗಳು ಸಹಸಂಬಂಧ ಹೊಂದಿರುವುದರಿಂದ ಎರಡೂ ತರಗತಿಗಳ ಮಕ್ಕಳು ಒಟ್ಟಿಗೆ ಸೇರಿ ಚಟುವಟಿಕೆಯಲ್ಲಿ ತೊಡಗುವರು. | | | ಸಾ.ಉ.ಉ.ಕಾ ಕೈ-ಬೆರಳನ್ನು ಬಳಸಿ ಚಿತ್ರ ಬರೆಯುವುದು. | | | | |
| | 20 ನಿ | | | | ಶಿಕ್ಷಕ | ಶಿಕ್ಷಕರು ಎರಡೂ ತರಗತಿಯ ಮಕ್ಕಳನ್ನು ಸೇರಿಸಿ, ಮಕ್ಕಳ ಸಂಖ್ಯೆಗೆಳಿಗೆ ಅನುಗುಣವಾಗಿ 4–5 ಗುಂಪುಗಳನ್ನಾಗಿ ಮಾಡಿ, ವೃತ್ತಾಕಾರದಲ್ಲಿ ಕೂರಿಸುವರು. ನಂತರ ಪ್ರತಿ ಗುಂಪಿನ ಎದುರು ಚಿಕ್ಕ ಚಿಕ್ಕ ಬಟ್ಟಲುಗಳಲ್ಲಿ ಅಥವಾ 3 ಬಣ್ಣಗಳನ್ನು ಇಡುವರು ಹಾಗು ಕೊಟ್ಟಿರುವ ಬಣ್ಣಗಳನ್ನು ಗುರುತಿಸಲು ಹೇಳುವರು. | | | | | |
| | 20 ನಿ | | | | ಶಿಕ್ಷಕ | ಶಿಕ್ಷಕರು ಒಂದು ಕಾರ್ಡಿನ ಮೇಲೆ ಮಾದರಿಯಾಗಿ ತನ್ನ ಬೆರಳುಗಳನ್ನು ಬಣ್ಣದಲ್ಲಿ ಅದ್ದಿ ವಿವಿಧ ಚಿತ್ರಗಳನ್ನು ಬಿಡಿಸಿತೋರಿಸುವರು. ಚಿತ್ರ ರಚಿಸುವಾಗ ಗಮನಿಸುವಂತೆ ಹೇಳುವರು.<br>ನಂತರ ಆಯ್ದ 2–3 ಮಕ್ಕಳಿಂದ ತಮಗೆ ಬಂದಂತೆ ಇತರ ಚಿತ್ರ ರಚಿಸುವಂತೆ ಸೂಚಿಸಿ, ಇತರ ಮಕ್ಕಳಿಗೆ ಅದನ್ನು ಪ್ರದರ್ಶಿಸುವರು. | | | | | |
| | 30 ನಿ | | | | ಶಿಕ್ಷಕ | ಈಗ ಪ್ರತಿ ಮಗುವಿಗೆ ಕತ್ತರಿಸಿದ (10 x 10 ಸೆಂ.ಮೀ) ಅಳತೆಯ ಕಾರ್ಡ್ ವಿತರಿಸಿ, ತಾವು ಮಾಡಿರುವ ಮಾದರಿ ಚಿತ್ರಗಳಲ್ಲಿ ಒಂದನ್ನು ಅನುಸರಿಸಿ ಚಿತ್ರ ರಚಿಸುವಂತೆ ಸೂಚನೆ ನೀಡುವರು.<br>ಶಿಕ್ಷಕರು ಮಕ್ಕಳ ಚಟುವಟಿಕೆ ಗಮನಿಸುತ್ತಾ ಸೂಕ್ತ ಮಾರ್ಗದರ್ಶನ ನೀಡುವರು. | | | | | |
| | 10 ನಿ | | | | ಶಿಕ್ಷಕ | ಕೊನೆಯಲ್ಲಿ ಶಿಕ್ಷಕರು, ಎಲ್ಲಾ ಮಕ್ಕಳು ತಯಾರಿಸಿದ ಚಿತ್ರಗಳನ್ನು ತರಗತಿಯ ಎದುರಿನಲ್ಲಿ ಜೋಡಿಸಿ ಇತರ ವಿದ್ಯಾರ್ಥಿಗಳಿಗೆ ಪ್ರದರ್ಶನ ಮಾಡುವರು. ಉತ್ತಮ ಚಿತ್ರ ಗುರುತಿಸಿ ಪ್ರಶಂಸಿಸುವರು. | | | | | |

""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>Kan-18 | 10 ನಿ | ಕನ್ನಡ<br>ಒಗ್ಗಟ್ಟಿನಲ್ಲಿ ಬಲವಿದೆ ಮತ್ತು ರೇಖಾಭ್ಯಾಸ | * ಹೇಳಲಾದ ಪದ್ಯದಲ್ಲಿನ ಮಾಹಿತಿಯನ್ನು ನೆನಪಿಸಿಕೊಳ್ಳುವುದು.<br>* ಬರವಣಿಗೆ ಪೂರಕ ಅಭ್ಯಾಸ | | ಶಿಕ್ಷಕ | ಮಕ್ಕಳು ಬರೆದು ತಂದ ರೇಖಾಭ್ಯಾಸದ ಹಾಳೆಗಳನ್ನು ಪರಿಶೀಲಿಸುವರು. | ಕನ್ನಡ<br>ಆಪತ್ತಿಗಾದವನು | * ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವುದು.<br>* ಸರಳ ವಿವರಣಾತ್ಮಕ ವಾಕ್ಯಗಳನ್ನು ಬರೆಯುವುದು. | ಪಠ್ಯ ಪುಸ್ತಕ | ಶಿಕ್ಷಕ | ಪಠ್ಯಪುಸ್ತಕ ಪುಟಸಂಖ್ಯೆ 34ನ್ನು ತೆರೆದು ತರಗತಿ ಪ್ರಾರಂಭಿಸುವವರೆಗೆ ಮನಸ್ಸಿನಲ್ಲಿ ಓದಿಕೊಳ್ಳುವಂತೆ ತಿಳಿಸುವರು. |
| | 30 ನಿ | | | | ಸ್ವಕಲಿಕೆ | ಪುಟಸಂಖ್ಯೆ 17ರ ರೇಖಾಭ್ಯಾಸವನ್ನು ಪೂರ್ಣಗೊಳಿಸಲು ಸೂಚಿಸುವರು. | | | ಪಠ್ಯ ಪುಸ್ತಕ | ಶಿಕ್ಷಕ | ಪುಟಸಂಖ್ಯೆ 35ರ "ಆನೆ ಸೊಂಡಿಲಿನಿಂದ..........ಕಾಡಿನ ನಿಯಮವಲ್ಲವೆ" ವರೆಗೆ ಸೂಕ್ತ ಸ್ವರಭಾರದೊಂದಿಗೆ ಶಿಕ್ಷಕರು ಓದುವರು. ಮಕ್ಕಳು ಆಲಿಸುತ್ತಾ ಪಾಠವನ್ನು ಗಮನಿಸುವರು.<br>* ಪ್ರತಿ ವಿದ್ಯಾರ್ಥಿಯಿಂದ ಮೇಲಿನ ಪಾಠಭಾಗವನ್ನು ಓದಿಸುವರು ಮಕ್ಕಳ ತಪ್ಪುಗಳನ್ನು ತಿದ್ದಿ ಮಾದರಿಯಂತೆ ಓದಲು ಸಹಾಯಮಾಡುವರು.<br>* ಹೊಸ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಓದಿಸುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ವೈಯಕ್ತಿಕವಾಗಿ ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ಮಾಡುವರು. | | | | ಶಿಕ್ಷಕ | ಓದಿಸಿದ ಪಾಠ ಭಾಗವನ್ನು ಮೊದಲು ಓದಿಕೊಂಡು ನಂತರ ನಕಲು ಮಾಡಲು ತಿಳಿಸುವರು. |
| | 03 ನಿ | | | ಪಠ್ಯ ಪುಸ್ತಕ<br>ವಾಲ್<br>ಸ್ಲೇಟ್ | ಶಿಕ್ಷಕ | * ಮೇಲಿನ ಚಟುವಟಿಕೆಯಲ್ಲಿ ತಪ್ಪಾದ ಭಾಗಗಳನ್ನು ಪುನಃ ಅಗತ್ಯ ಮಾರ್ಗದರ್ಶನದಲ್ಲಿ ಸರಿಪಡಿಸುವರು.<br>* ಪಠ್ಯಪುಸ್ತಕ 18ರ ರೇಖಾಭ್ಯಾಸಗಳನ್ನು ಬರೆಯುವ ಕ್ರಮವನ್ನು ಕಪ್ಪುಹಲಗೆಯ ಮೇಲೆ ಬರೆದು ಬರೆಯುವ ಕ್ರಮವನ್ನು ಹೇಳಿ ಕೊಡುವರು. ಪ್ರತಿ ವಿದ್ಯಾರ್ಥಿಯಿಂದ ಒಮ್ಮೆ ಅದನ್ನು ಬರೆಸಿ ಬರೆಯುವ ಕ್ರಮವನ್ನು ಕಲಿಸುವರು. | | | | ಓರೆಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | | | | | | * **ಸೂಚನೆ :** 2ನೇ ತರಗತಿಯ ಚಟುವಟಿಕೆಯನ್ನು ಪರಿಶೀಲಿಸಿ ಅಗತ್ಯ ಪ್ರೋತ್ಸಾಹ ನೀಡುವುದು. | | | | | |

**""ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**